**ದಿ: 20-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ನಂ 2 ರ ಪರ ಶ್ರೀ ಪಿ. ಎಸ್. ಎನ್. ವಕೀಲರಿಂದ:**

ನಾವು ದಾವೆಯನ್ನು ಸರ್ವೆ ನಂ 89 ಕ್ಕೆ ಸಂಬಂಧಿಸಿದಂತೆ ಮಾತ್ರ ಸಲ್ಲಿಸಿರುತ್ತೇವೆ. 2 ನೇ ಪ್ರತಿವಾದಿಯ ವಂಶಾವಳಿ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-21 ರಿಂದ 65 ದಾಖಲೆಗಳು ದಾವಾ ಆಸ್ತಿಗೆ ಸಂಬಂಧಿಸಿದ್ದು ಅಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ಜಮೀನುಗಳು ತಮಗೆ ಬಂದಿವೆ ಎಂದು ಹೇಳಿದ್ದರಿಂದ ನಾವು ನಿಪಿ-21 ರಿಂದ 65 ದಾಖಲೆಗಳನ್ನು ಹಾಜರ ಪಡಿಸಿದ್ದೇವೆ. ನಿಪಿ-66 ರಲ್ಲಿ ಸಾದಾ ರೈತ ಎಂದು ನಮೂದಿಸಲಾಗಿದೆ ಎಂದರೆ ನಿಜ. ನಿಪಿ-66 ರಲ್ಲಿ ನಮೂದಿಸಿದ ಕಟವಪ್ಪ ಫಕ್ಕಿರಪ್ಪ ಗೌಳಿ ಇವರು ಫಾರಂ ನಂ 7 ನ್ನು ತುಂಬಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ಕಟವಪ್ಪ ಇವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ಹಾಗೂ ಪ್ರತಿವಾದಿಯರ ವಿರುದ್ಧ ಮಾಲ್ಕಿ ಹಕ್ಕು ಕೋರಿ ಯಾವುದೆ ಕ್ರಮ ಜರುಗಿಸಿಲ್ಲ ಎನ್ನುವದು ನನಗೆ ಗೊತ್ತಿಲ್ಲ. ನಿಪಿ-67 ರ ಪ್ರಕಾರ ಮದ್ವಾಚಾರ್ಯರು ರಾಮಕೃಷ್ಣ ಎನ್ನುವವರಿಗೆ ಕಬ್ಜಾ ವತ್ತಿ ಹಾಕಿದ ಬಗ್ಗೆ ದಾಖಲೆ ಎನ್ನುವದು ನನಗೆ ಗೊತ್ತಿಲ್ಲ. ನಿಪಿ-68 ರ ಪ್ರಕಾರ ಮದ್ವಾಚಾರ್ಯರು ಶಿರಸಿಯಲ್ಲಿ ಮರಣ ಹೊಂದಿದ ನಂತರ ಅವರ ವಾರಸುದಾರರ ಹೆಸರು ದಾಖಲಾದ ಬಗ್ಗೆ ದಾಖಲೆ ಎನ್ನುವದು ಸುಳ್ಳು. ನಿಪಿ-69 ಕ್ಕೂ ದಾವಾ ಆಸ್ತಿಗೆ ಸಂಬಂಧ ಇಲ್ಲ ಎನ್ನುವದು ನನಗೆ ಗೊತ್ತಿಲ್ಲ. ನಿಪಿ-70 ರ ಪ್ರಕಾರ ಕಟವಪ್ಪರವರ ಹೆಸರು

ರೈತ ಅಲ್ಲ ಎಂದು ಕಡಿಮೆ ಆಗಿದೆ ಎನ್ನುವದು ನನಗೆ ಗೊತ್ತಿಲ್ಲ. ನಿಪಿ-71 ರಿಂದ 73 ದಾಖಲೆಗಳು ದಾವಾ ಆಸ್ತಿಗೆ ಸಂಬಂಧಿಸಿದ್ದಲ್ಲ ಅಂದರೆ ನಿಜ. ಸರ್ವೆ ನಂ 37, 38 ಮತ್ತು 39 ಕ್ಕೆ ಸಂಬಂಧಿಸಿದಂತೆ ಹನಮಂತ ಆಚಾರ್ಯ ಗುಡಿ ಇವರ ವಾರಸುದಾರರು ಯಾವುದೆ ಹಕ್ಕು ಮಾಗಣಿ ಕೇಳಿಲ್ಲ ಅಂದರೆ ನಿಜ. ನಾನು ಹಾಜರ ಪಡಿಸಿದ ನಿಪಿ-21 ರಿಂದ 73 ದಾಖಲೆಗಳು ದಾವಾ ಆಸ್ತಿಗೆ ಸಂಬಂಧಿಸಿದ್ದಲ್ಲ ಅಂದರೆ ಸರಿಯಲ್ಲ. ನಾನು ಹಾಜರ ಪಡಿಸಿದ ದಾಖಲೆಗಳು ದಾವಾ ಆಸ್ತಿಗೆ ಸಂಬಂಧ ಪಡಿಸದೆ ಇದ್ದರೂ ಕೂಡಾ ನ್ಯಾಯಾಲಯವನ್ನು ತಪ್ಪು ದಾರಿಗೆ ಎಳೆಯುವ ಸಲುವಾಗಿ ಹಾಜರ ಪಡಿಸಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಗುಡಿ ಇವರ ಕುಟುಂಬಕ್ಕೆ ಮಾತ್ರ ಸಂಬಂಧಿಸಿದ್ದು ಅಂದರೆ ಸರಿಯಲ್ಲ. ನಮ್ಮ ಆಸ್ತಿಯನ್ನು ನಮ್ಮ ಪೂರ್ವಜರು ಈ ಹಿಂದೆಯೇ ಭಕ್ಷಿಸ ಪತ್ರದ ಮೂಲಕ ನೀಡಿದ್ದು ಅದರಲ್ಲಿಯ ನಮ್ಮ ಹಕ್ಕು ನಷ್ಟವಾಗಿದೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ 4 ಮತ್ತು 5 ರ ಪರ ಎಸ್ ಐ ಕೆ ವಕೀಲರಿಂದಃ**

ಏನು ಇಲ್ಲ

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.